

# ಹುಲಿಯ ಬಾಲದಿಂದ ಗಡ್ಡಕ್ಕೆ ಮಸಾಜ್!

**ಹುಲಿಯನ್ನು ಮುಟ್ಟುವ, ಅದರ ಬಾಲವನ್ನು ಹಿಡಿದು ಗಡ್ಡಕ್ಕೆ ಉಜ್ಜಿಕೊಳ್ಳುವ ಲೇಖಕರ ಆಸೆ 'ಟೈಗರ್ ಪಾರ್ಕ್'ನಲ್ಲಿ ನನಸಾಯಿತು. ನೀವೂ 'ಹುಲಿಸವಾರಿ' ಮಾಡಬಹುದು! ಅದಕ್ಕಾಗಿ ಥಾಯ್ಲೆಂಡ್‌ಗೆ ಹೋಗಬೇಕಷ್ಟೆ.**

**■ ಆರ್ಕೆ ಆಡುಕಳ**



ಹುಲಿಯನ್ನು ಮುಟ್ಟುವ ಆಸೆ ಯಾರಿಗೆ ಇರುವುದಿಲ್ಲ? ಮೈಸೂರು ಮೃಗಾಲಯಕ್ಕೆ ಹೋದಾಗಲೆಲ್ಲ ಅದರ ಆ ದಷ್ಟಪುಷ್ಟವಾದ ಮೈದಡವಿ, ಹೊಟ್ಟೆಯ ಕೆಳಭಾಗವನ್ನೊಮ್ಮೆ ಸವರಿ, ಅದರ ಬಾಲವನ್ನು ಹಿಡಿದು ನನ್ನ ಗಡ್ಡಕ್ಕೆ ಉಜ್ಜುವ ಆಸೆ ಹಲವು ಬಾರಿ ಆಗಿತ್ತು. ಅದು ಬರಿಯ ಆಸೆಯಷ್ಟೇ ಅಂದುಕೊಂಡು ಕನಸು ಕಂಡು ಸುಮ್ಮನಿದ್ದೆ. ನನಸಾಗಬಹುದೆಂದು ಯೋಚಿಸಿರಲಿಲ್ಲ. ಹುಲಿಯನ್ನು ಮುಟ್ಟಿದ್ದಷ್ಟೇ ಅಲ್ಲ, ಅದರ ಮೈಮೇಲೆ ಮಲಗಿ ಬಂದಿದ್ದು ಕಳೆದ ಬಾರಿ ಥಾಯ್ಲೆಂಡ್‌ಗೆ ಹೋದಾಗಲೇ.

ಥಾಯ್ಲೆಂಡ್‌ಗೆ ಹೋದವರು ಫುಕೆಟ್‌ಗೆ ಹೋಗುವುದು ಸಾಮಾನ್ಯ. ಫುಕೆಟ್‌ನ ನೈಟ್ ಲೈಫ್ ಅದ್ಭುತ ಎಂದು ಕೇಳಿದ್ದೆ. ಆದರೆ ನಾನೇನೂ ಬ್ಯಾಚುಲರ್ ಪಾರ್ಟಿಗೆಂದು ಹೋದವನಲ್ಲ. (ಹೆಂಡತಿಯೂ ಜೊತೆಗಿದ್ದಳು ಬೇರೆ.) ಫುಕೆಟಿನ ಬೀಚುಗಳು ಬಹು ಸುಂದರ ಎಂದೂ ಕೇಳಿದ್ದೆ ಹಾಗೂ ಅಲ್ಲಿಂದ ಫಿಫಿ ಐಲೆಂಡ್‌ಗೆ ಹೋಗುವುದಿತ್ತು. ಹಾಗಾಗಿ ನಾವು ಫುಕೇಟಿಗೆ ಹೋಗುವ ಯೋಚನೆ ಮಾಡಿದ್ದೆವು. ನಾವೇನು ಹೆಚ್ಚಿಗೆ ಪ್ಲಾನ್‌ನಲ್ಲಿ ಹೋದವರಲ್ಲ. ಹೋಟೆಲ್ ತಲುಪಿದ ಮೇಲೆ ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ಹೋಟೆಲಿನಲ್ಲಿ ಕೇಳಿದ್ದೆ. 'ಟೈಗರ್ ಪಾರ್ಕನ್ನು ಮಾತ್ರ ನೋಡಲು ಮರೆಯಬೇಡಿ. ಅಲ್ಲಿ ನೀವು ಹುಲಿಯನ್ನು ಮುಟ್ಟಬಹುದು ಜೊತೆಗೆ ಫೋಟೊ ತೆಗೆಸಿಕೊಳ್ಳಬಹುದು' ಎಂದಾಗ ನಮಗಿಬ್ಬರಿಗೂ ರೋಮಾಂಚನವಾಗಿದ್ದು ಸುಳ್ಳಲ್ಲ.

ಬೆಳಿಗ್ಗೆಯೇ ಎದ್ದು, ರೆಡಿಯಾಗಿ ಟೈಗರ್ ಪಾರ್ಕ್ ತಲುಪಿದ್ದೆವು. ಆಗಲೇ ಗೂಗಲ್ ಮಾಡಿ ಈ ಪಾರ್ಕಿನ ಬಗ್ಗೆ ಸಾಕಷ್ಟು ವಿಷಯವನ್ನು ತಿಳಿದಿದ್ದರೂ, ಪಾರ್ಕಿನ ಒಳಗೆ ಹೋಗುವಾಗ ಮನಸ್ಸಿನಲ್ಲಿ ಅದೇನೋ ಭಯ ಆವರಿಸಿತ್ತು. ಟೈಗರ್ ಹತ್ತಿರದಲ್ಲಿರುವಾಗ ಕೈ ಕಾಲಿಗೆ ಬಾಯಿ ಹಾಕಿದರೆ ಏನು ಮಾಡುವುದು? ಸುಮ್ಮನೆ ಆಟವಾಡುವ ಭರದಲ್ಲಿ ಒಮ್ಮೆ ತನ್ನ ಪಂಜಾವನ್ನು ಬೀಸಿದರೂ ಸಾಕಲ್ಲ? ಇದನ್ನು ಯೋಚಿಸಿಯೇ ಸಣ್ಣಗೆ ಮೈ ಬೆವೆತಿತ್ತು. ಆದರೆ, ಉದ್ಯಾನದೊಳಗೆ ಹೋದಾಗ ಆದುದೇ ಬೇರೆ.

ಟೈಗರ್ ಪಾರ್ಕ್‌ನಲ್ಲಿ ನಾವು ಬೇರೆ ಬೇರೆ ವಯಸ್ಸಿನ ಹುಲಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕೌಂಟರ್‌ನಲ್ಲಿ ನಿಂತು ಒಳಗೆ ಅಡಿಯಿಡುತ್ತಿದ್ದಂತೆ ಅದೇನೋ ಹುಮ್ಮಸ್ಸು ಮೈದುಂಬಿಕೊಂಡಿತು. ಜೀವನದಲ್ಲಿ ಏನು ಸಾಧ್ಯವಿಲ್ಲ ಅಂದುಕೊಂಡಿದ್ದೆನೋ ಅದನ್ನು ಸಾಧಿಸಲು ಹೊರಟ ಧೈರ್ಯ. ಆ ಕ್ಷಣಕ್ಕೆ ಅದು ಹುಂಬ ಧೈರ್ಯ ಆಗಿತ್ತು ಅಷ್ಟೇ, ನಾನು ಮತ್ತು ನನ್ನ ಹೆಂಡತಿ ಒಬ್ಬರ ಮುಖ